ಜಾಗದಲ್ಲಿ ಹೊಸದಾಗಿ ಎರಡು ಐ.ಟಿ.ಐ ಪ್ರಾರಂಭಮಾಡುವುದಕ್ಕೆ ಜಾಗದ ವ್ಯವಸ್ಥೆ ಮಾಡಿಕೊಡತಕ್ಕಂಥ ಕೆಲಸ ತಕ್ಷಣ ಮಾಡಬೇಕಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ. ಎ.ಎಂ. ಹಿಂಡಸಗೇರಿ :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೆಲವು ಕಡೆ ಐ.ಟಿ.ಐ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಜಾಗವನ್ನು ತೆಗೆದುಕೊಳ್ಳಲಾಗಿದೆ. ಹಾಗೆಯೇ ಬಾಗಲಕೋಟೆಯಲ್ಲಿಯೂ ಕೂಡ ಜಾಗಗ ತೆಗೆದುಕೊಂಡು ಶೀಘ್ರದಲ್ಲಿ ಮಾಡಿಕೊಡಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶಿವಮೊಗ್ಗ ವಿಧಾನಸಭಾ ಕ್ಷೇತ್ರಕ್ಕೆ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಹಣ ಬಿಡುಗಡೆ.

247(2200) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) :— ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ನಬಾರ್ಡ್‌ನಿಂದ ಬಿಡುಗಡೆಯಯಾದ ಹಣವೆಷ್ಟು?

ಆ) ಶಿವಮೊಗ್ಗ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ವಿವರ ನೀಡುವುದು?

ಶ್ರೀ ರಮಾನಾಥ್ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :—

ಅ) ನಬಾರ್ಡ್ ನೇರವಾಗಿ ಮಂಡಳಿಗೆ ಹಣ ಬಿಡುಗಡೆ ಮಾಡುವುದಿಲ್ಲ. ಮಂಡಳಿಯು ನಬಾರ್ಡ್ ಕಾಮಗಾರಿಗಳಿಗೆ ಖರ್ಚು ಮಾಡಿದ ಹಣವನ್ನು ನಬಾರ್ಡ್ ಸಂಸ್ಥೆಯು ಸರ್ಕಾರಕ್ಕೆ ಮರು ಪಾವತಿ ಮಾಡುತ್ತದೆ. ಈವರೆಗೂ ಮಂಡಳಿಯು ನಬಾರ್ಡ್ ಕಾಮಗಾರಿಗಳಿಗೆ 32.83 ಕೋಟಿ ರೂ.ಗಳನ್ನು ಖರ್ಚು ಮಾಡಿರುತ್ತದೆ.

ಆ) ಶಿವಮೊಗ್ಗ ಕ್ಷೇತ್ರದಲ್ಲಿ ನಬಾರ್ಡ್ ಕಾಮಗಾರಿಗಳ ವಿವರ ಕೆಳಗಿನಂತಿದೆ:

1) ಎನ್.ಆರ್‌ಪುರ ಸಿದ್ದಾಮಾಜಿ ಹೊಸೂರು ರಸ್ತೆ ಅಂದಾಜು ಮೊತ್ತ 35.50 ಲಕ್ಷ ರೂ.ಗಳು - ಖರ್ಚು 30.58 ಲಕ್ಷ ರೂಗಳಳು.

2) ಬಿ.ಹೆಚ್. ರೋಡ್ -ಕೆ.ಎಮ್. ಡೈರಿ -ಹೊಳೆಹೊನ್ನೂರು ರಸ್ತೆ, ಅಂದಾಜು ಮೊತ್ತ 29.12. ಲಕ್ಷ ರೂ.ಗಳು - ಖರ್ಚು 9.77 ಲಕ್ಷರೂ.ಗಳು

3) ವೊದ್ದಿನಕೊಪ್ಪ ಬೋಜಪ್ಪ ಕ್ಯಾಂಪ್ ರಸ್ತೆ, ಅಂದಾಜು ಮೊತ್ತ 19.10 ಲಕ್ಷ ರೂ.ಗಳು- ಖರ್ಚು 9.82 ಲಕ್ಷ ರೂ.ಗಳು.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ :— ಮಾನ್ಯ ಅಧ್ಯಕ್ಷರೆ, ಮಲೆನಾಡು ಪ್ರದೇಶದ ಭಾಗಗಳಲ್ಲಿ ಈ ವರ್ಷ ಹಾಕತಕ್ಕಂಥ ಟಾರ್ ಮುಂದಿನ ವರ್ಷದವರೆಗೆ ಉಳಿಯುವುದಿಲ್ಲ. ಇವತ್ತಿನ ದಿವಸ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ವ್ಯಾಪ್ತಿಗೆ ಸುಮಾರು 73 ವಿಧಾನಸಭಾ ಕ್ಷೇತ್ರಗಳು ಸೇರಿಕೊಂಡಿವೆ. ಇಲ್ಲಿಗೆ ಕೇವಲ 32 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಸನ್ಮಾನ್ಯ ಸಚಿವರು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಸಭೆಗೆ ಬಂದಾಗ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಹೆಚ್ಚಿಗೆ ಹಣ ಕೊಡಬೇಕೆಂದು ಮಂಡಳಿಯ ಸದಸ್ಯರೆಲ್ಲರೂ ಸಹ ಕೇಳಿದ್ದರು. ಆದ್ದರಿಂದ, ಅದಷ್ಟು ಜಾಗ್ರತೆ ಮಂಡಳಿಗೆ ಹಣ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಮಾನಾಥ್ ರೈ :— ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರೂ ಕೂಡ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯ ಸದಸ್ಯರಾಗಿದ್ದಾರೆ. ಸದರಿ ಮಂಡಳಿಯು ಸರ್ಕಾರ ಬಜೆಟ್‌ನಲ್ಲಿ ಬಿಡುಗಡೆ ಮಾಡತಕ್ಕಂಥ ಹಣವನ್ನು ಖರ್ಚು ಮಾಡುವುದು ಮತ್ತು ನಬಾರ್ಡ್‌ನಿಂದ ಬಿಡುಗಡೆ ಆಗತಕ್ಕಂಥ ಹಣವನ್ನು ಖರ್ಚು ಮಾಡತಕ್ಕಂಥದ್ದು ಮಂಡಳಿಯ ಕೆಲಸವಾಗಿದೆ. ಕಳೆದ ಸಾಲಿನಲ್ಲಿ ಬಜೆಟ್‌ನಲ್ಲಿ ನಿಗದಿ ಮಾಡಿರತಕ್ಕಂಥ 34 ಕೋಟಿ ರೂಪಾಯಗಳಲ್ಲಿ 32 ಕೋಟಿ ರೂಪಾಯಿ ಬಿಡುಗಡೆಯಾಗಿದೆ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಪ್ರಾರಂಭವಾದಾಗಿನಿಂದ ಇಷ್ಟೊಂದು ಹಣ ಬಿಡುಗಡೆಯಾಗಿರಲಿಲ್ಲ. ಆದರೆ ಈ ಸಾರಿ ಸ್ವಲ್ಪ ಕಡಿಮೆ ಹಣ ಬಜೆಟ್‌ನಲ್ಲಿ ಇಡಲಾಗಿದೆ. ಬಜೆಟ್‌ನಲ್ಲಿ ಎಷ್ಟು ಹಣವನ್ನು ಕೊಟ್ಟಿರುತ್ತಾರೆಯೋ ಅಷ್ಟನ್ನು ಒದಗಿಸತಕ್ಕಂಥದ್ದು ನಮ್ಮ ಕರ್ತವ್ಯವಾಗಿರುತ್ತದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :— ಮಾನ್ಯ ಅಧ್ಯಕ್ಷರೆ, ನಬಾರ್ಡ್ ಯೋಜನೆಯಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಏನು ಮಾನದಂಡ ಇದೆ? ಈ ವರ್ಷ ಸದರಿ ಯೋಜನೆಗೆ ಎಷ್ಟು ಹಣವನ್ನು ನಿಗದಿಪಡಿಸಲಾಗಿದೆ? ಸದರಿ ಮಂಡಳಿಗೆ ಈಗ ಕೊಟ್ಟಿರತಕ್ಕಂಥ 5 ಲಕ್ಷ ರೂಪಾಯಿ ಸಾಕಾಗುವುದಿಲ್ಲ. ಆದ್ದರಿಂದ, ಇದಕ್ಕೆ ಹೆಚ್ಚಿಗೆ ಹಣ ಕೊಡುವುದಕ್ಕೆ ಅವಶ್ಯಕತೆ ಇದೆಯೆ?

ಶ್ರೀ ಬಿ. ರಮಾನಾಥ್ ರೈ :— ಮಾನ್ಯ ಅಧ್ಯಕ್ಷರೆ, ಮಂಡಳಿಯ ಸದಸ್ಯರೆಲ್ಲರೂ ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ ಈ ವರ್ಷ ಕೊಟ್ಟಿರತಕ್ಕಂಥ 5 ಲಕ್ಷ ರೂಪಾಯಿ ನಿಜವಾಗಿಯೂ ಏತಕ್ಕೂ ಸಾಲದು. ಆದರೆ ಬಜೆಟ್‌ನಲ್ಲಿಟ್ಟಿರತಕ್ಕಂಥ ಹಣವನ್ನು ಒದಗಿಸುತ್ತೇನೆ. ಇವತ್ತಿನದಿವಸ ಸ್ಪಿಲ್‌ಓವರ್ ಕಾಮಗಾರಿಗಳು

ಸಾಕಷ್ಟು ಬಾಕಿ ಇವೆ. ಈಗಾಗಲೇ ನಾವು ಒಟ್ಟು 266 ಕಾಮಗಾರಿಗಳನ್ನು ನಬಾರ್ಡ್‌ನಿಂದ ಬಿಡುಗಡೆಯಾಗಿರತಕ್ಕಂಥ ಹಣದಿಂದ ಕೆಲಸ ಮಾಡಲಾಗಿದೆ. ಇದರ ಅಂದಾಜು ವೆಚ್ಚ ಸುಮಾರು 58 ಕೋಟಿ ರೂಪಾಯಿಗಳಷ್ಟಾಗಿದೆ. ಕಳೆದ ವರ್ಷ ಮಂಡಳಿಯು ನಬಾರ್ಡ್ ಕಾಮಗಾರಿಗಳಿಗೆ 32 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುತ್ತದೆ. ಈಗಾಗಲೇ ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಮಂಜೂರಾತಿ ಆಗಿರತಕ್ಕಂಥ ಅಂದಾಜು ಪಟ್ಟಿಯನ್ನು ಕಳುಹಿಸಿಕೊಟ್ಟಿದ್ದೇವೆ. ಇದಕ್ಕೆ ಆದಷ್ಟು ಶೀಘ್ರವಾಗಿ ಮಂಜೂರಾತಿ ಮಾಡತಕ್ಕಂಥ ಕೆಲಸವನ್ನು ನಾವು ಮಾಡುತ್ತೇವೆ.

ಶ್ರೀ ಡಿ.ವಿ. ಸದಾನಂದಗೌಡ :— ಮಾನ್ಯ ಅಧ್ಯಕ್ಷರೆ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಪ್ರತಿಯೊಬ್ಬ ಶಾಸಕರು ಸುಮಾರು 35 ಲಕ್ಷ ರೂಪಾಯಿಗಳಷ್ಟು ಹೊಸ ಕಾಮಗಾರಿಗಳನ್ನು ಮಾಡಿಸುವುದಕ್ಕೆ ಕಳೆದ ವರ್ಷ ಹಣವನ್ನು ಒದಗಿಸಿದ್ದರು. ಆದರೆ ಈ ವರ್ಷ ಸದರಿ ಮಂಡಳಿಗೆ ಕೇವಲ 5 ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ. ಶಾಸಕರ ನಿಧಿ ಎಂದು 25 ಲಕ್ಷ ರೂಪಾಯಿ ಕೊಡುವುದರ ಮೂಲಕ, ಅಲ್ಲಿಂದ ಹಣ ತೆಗೆದು ಇಲ್ಲಿಗೆ ಕೊಡತಕ್ಕಂಥ ಕೆಲಸವನ್ನು ಸರ್ಕಾರ ಮಾಡಿದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಸ್ಪಷ್ಟೀಕರಣ ಕೊಡಬೇಕಾಗುತ್ತದೆ. ಏಕೆಂದರೆ ಸರ್ಕಾರ ಪ್ರಚಾರ ಗಿಟ್ಟಿಸಿಕೊಳ್ಳುವುದಕ್ಕೋಸ್ಕರ, ಶಾಸಕತರ ನಿಧಿ ಎಂದು 5 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿ, ಇನ್ನೊಂದು ಕಡೆ ಮಲೆನಾಡು ಯೋಜನೆಯಲ್ಲಿ ಈ ವರ್ಷ ಕೇವಲ 5 ಲಕ್ಷ ಕೊಟ್ಟಿರುವುದಕ್ಕೆ ಕಾರಣ ಏನೆಂದು ತಿಳಿಸಬೇಕು. ಒಟ್ಟಾರೆ ನಮಗೆ ಕೊಡತಕ್ಕಂಥ ಹಣವನ್ನು ಕಡಿಮೆ ಮಾಡಲಾಗಿದೆ. ಈ ವಿಷಯದ ಬಗ್ಗೆ ನಾನು ಮಾನ್ಯ ಸಚಿವರ ಮೇಲೆ ದೂಷಣೆ ಮಾಡುತ್ತಿಲ್ಲ. ಕಳೆದ ಸಾಲಿನಲ್ಲಿ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ನೀಡಿರತಕ್ಕಂಥ ಹಣಕ್ಕಿಂತ ಹೆಚ್ಚಿಗೆ ಹಣವನ್ನು ಈ ವರ್ಷ ಕೊಡಬೇಕೆಂದು ಮಾನ್ಯ ಮುಖ್ಯಮಂತ್ರಿಯವರಲ್ಲಿ ಮನವರಿಕೆಮಾಡಿಕೊಳ್ಳುತ್ತೇನೆ. ಈ ಹಣವನ್ನು ಶಾಸಕರ ನಿಧಿಗೆ ಲಿಂಕ್ ಮಾಡಿ ಶಾಸಕರಿಗೂ ಮತ್ತು ಜನತೆಗೆ ಮೋಸ ಮಾಡಿದ್ದೀರೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ :— ಮಾನ್ಯ ಅಧ್ಯಕ್ಷರೆ, ಈ ವರ್ಷ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ಕೊಟ್ಟಿರತಕ್ಕಂಥ 5 ಲಕ್ಷ ರೂಪಾಯಿಗಳಿಂದ ಮಂಡಳಿಯ ಧ್ಯೇಯೋದ್ದೇಶಗಳನ್ನು ಸಹ ಈಡೇರಿಸುವುದಕ್ಕೆ ಆಗುವುದಿಲ್ಲ.

ಶ್ರೀ ಬಿ. ರಮಾನಾಥ್ ರೈ :— ಮಾನ್ಯ ಅಧ್ಯಕ್ಷರೆ, ನಬಾರ್ಡ್ ನೆರವಿಗಾಗಿ ಈ ವರ್ಷ ಕ್ಯಾಬಿನೆಟ್ ಸಬ್ ಕಮಿಟಿಯಿಂದ 40 ಕೋಟಿ ರೂಪಾಯಿಗಳ ಒಂದು ಅಂದಾಜು ಪಟ್ಟಿಯನ್ನು ತಯಾರು ಮಾಡಿ ನಬಾರ್ಡ್‌ಗೆ ಕಳುಹಿಸಿಕೊಟ್ಟಿದ್ದೇವೆ. ಈ

ಹಣ ಹಂತ ಹಂತವಾಗಿ ಬಿಡುಗಡೆಯಾಗುತ್ತದೆ. ಸದರಿ ಹಣದಿಂದ ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ವ್ಯಾಪ್ತಿಯ ಕಾಮಗಾರಿಗಳನ್ನು ಮಾಡುವುದಕ್ಕೆ ಖರ್ಚು ಮಾಡಲಾಗುತ್ತದೆ. ಈ ಸಲ ಬಿಡುಗಡೆಯಾಗಿರತಕ್ಕಂಥ ಹಣದಿಂದ ನಾವು ಸ್ಪಿಲ್ ಓವರ್ ಕಾಮಗಾರಿಗಳನ್ನು ಮಾಡಿಸುವುದಕ್ಕಾಗಿ ಆದ್ಯತೆ ಕೊಡುತ್ತೇವೆ.

ಶ್ರೀ. ಹೆಚ್.ಎಸ್. ಮಹದೇವ ಪ್ರಸಾದ್:— ಮಾನ್ಯ ಅಧ್ಯಕ್ಷರೆ, ನಬಾರ್ಡ್ ನೆರವಿನಲ್ಲಿ ಮಂಡಳಿ ವತಿಯಿಂದ ಸುಮಾರು 20 ಲಕ್ಷ ರೂಪಾಯಿಗಳನ್ನು ಖರ್ಚಾಗುವ ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳುವುದಕ್ಕೆ ಎಲ್ಲಾ ಶಾಸಕರಿಗೂ ಸೂಚನೆ ನೀಡಿದ್ದಾರೆ. ಒಂದು ಊರಿನಿಂದ ಇನ್ನೊಂದು ಊರಿಗೆ ರಸ್ತೆಯನ್ನು ಜೋಡಣೆ ಮಾಡತಕ್ಕಂಥ ಸಂದರ್ಭದಲ್ಲಿ ಸದರಿ ರಸ್ತೆಗೆ ಆಗತಕ್ಕಂಥ ಪೂರ್ಣ ಹಣವನ್ನು ಕೊಡಬೇಕೆಂದು ನಬಾರ್ಡ್‌ನವರು ತಮ್ಮ ಗೈಡ್‌ಲೈನ್ಸ್‌ನಲ್ಲಿ ಹೇಳಿದ್ದಾರೆ. ಆದ್ದರಿಂದ, 20 ಲಕ್ಷ ರೂಪಾಯಿಗಿಂತ ಹೆಚ್ಚು ಆಗತಕ್ಕಂಥ ರಸ್ತೆಗಳಿಗೆ ತಾವು ಮಂಜೂರಾತಿ ಕೊಡುತ್ತೀರಾ? ಏಕೆಂದರೆ ನಮ್ಮ ಭಾಗಗಳಲ್ಲಿ ಕೆಲವು ರಸ್ತೆಗಳನ್ನು ತೆಗೆದುಕೊಂಡಿದ್ದಾರೆ. ಆದರೆ ಕೆಲವೊಂದು ನಬಾರ್ಡ್ ವ್ಯಾಪ್ತಿಗೆ ಬರುತ್ತಿಲ್ಲವೆಂದು ಅವರು ಮಂಜೂರು ಮಾಡುತ್ತಿಲ್ಲ. ಇದರಿಂದ ಅನೇಕ ಕಾಮಗಾರಿಗಳು ಸ್ಥಗಿತವಾಗಿದೆ. ಇದರ ಬಗ್ಗೆ ಮಾನ್ಯ ಸಚಿವರು ಸ್ಪಷ್ಟೀಕರಣ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ರಮಾನಾಥ್ ರೈ:— ಮಾನ್ಯ ಅಧ್ಯಕ್ಷರೇ, ಕೆಲವು ಕಡೆ ನಬಾರ್ಡ್ ಕಾಮಗಾರಿಗಳಿಗೆ ಹೆಚ್ಚು ಕಡಿಮೆ ಹಣ ಕೊಡಲಾಗಿದೆ. ಆದರೆ ಕ್ಯಾಬಿನೆಟ್ ಸಬ್ ಕಮಿಟಿ ಒಪ್ಪಿಗೆಯಂತೆ ಈ ಹಣವನ್ನು ಸಮಾನವಾಗಿ ಹಂಚಿದಾಗ 20 ಲಕ್ಷ ರೂಪಾಯಿ ಬರುತ್ತದೆಂದು ಹೇಳಲಾಗಿದೆಯಷ್ಟೆ. ಸನ್ಮಾನ್ಯ ಸದಸ್ಯರು ಹೇಳಿರತಕ್ಕಂಥದರಲ್ಲಿ ಕೂಡ ಅರ್ಥ ಇದೆ. ಒಂದು ಊರಿನಿಂದ ಇನ್ನೊಂದು ಊರಿಗೆ ರಸ್ತೆಯನ್ನು ಜೋಡಣೆ ಮಾಡುವಾಗ ಹೆಚ್ಚು ಕಡಿಮೆ ಆದರೆ ಅದನ್ನು ಸರಿಪಡಿಸಿಕೊಂಡು ಮಂಜೂರಾತಿ ಕೊಡತಕ್ಕಂಥ ಜವಾಬ್ದಾರಿ ನನ್ನದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ:— ಮಾನ್ಯ ಅಧ್ಯಕ್ಷರೆ, ಕ್ಯಾಬಿನೆಟ್ ಸಬ್ ಕಮಿಟಿಯಲ್ಲಿ ಮಂಜೂರಾತಿ ಆಗಿರತಕ್ಕಂಥ ಒಂದು ಪ್ರಸ್ತಾವನೆಯನ್ನು ನಬಾರ್ಡ್‌ಗೆ ಕಳುಹಿಸಿಕೊಟ್ಟಿರುತ್ತಾರೆ. ನಿಮ್ಮ ಇಂಜಿನಿಯರ್‌ಗಳು ತಯಾರು ಮಾಡಿಕತಕ್ಕಂಥ ಪ್ರಸ್ತಾವನೆಯನ್ನು ತಾವು ಸಹ ಒಂದು ಸಾರಿ ಪರೀಶೀಲನೆ ಮಾಡಿ ಕಳುಹಿಸಿಕೊಟ್ಟಿರುತ್ತೀರಿ. ಇದು ನಬಾರ್ಡ್‌ಗೆ ಹೊದ ಮೇಲೆ ರಿಜೆಕ್ಟ್ ಆಗುವುದಕ್ಕೆ ಅವಕಾಶ ಮಾಡಬಾರದು.

ಶ್ರೀ ಬಿ. ರಮಾನಾಥ್ ರೈ :— ಮಾನ್ಯ ಅಧ್ಯಕ್ಷರೆ, ಕೆಲವು ಕಡೆ ಹೆಚ್ಚು ಕಡಿಮೆ ಖರ್ಚು ಆಗಿರತಕ್ಕಂಥ ವಿಷಯದ ಬಗ್ಗೆ ಈಗಾಗಲೇ ಮಂಡಳಿಯಲ್ಲಿ ಚರ್ಚೆಯಾಗಿದೆ. ವಿವೇಚನಾ ನಿಧಿ ಮತ್ತು ನಬಾರ್ಡ್ ನೆರವನ್ನು ಮಂಡಳಿಗೆ ಸಮಾನವಾಗಿ ಹಂಚ್ಚುತ್ತೇವೆಂದು ಚರ್ಚೆಯ ಸಂದರ್ಭದಲ್ಲಿ ನಾನು ಹೇಳಿದ್ದೇನೆ. ಎಲ್ಲರಿಗೂ ಸಮಾನವಾಗಿ ಸಿಗತಕ್ಕಂಥದ್ದು ನನ್ನ ಉದ್ದೇಶವಾಗಿದೆ. ನಬಾರ್ಡ್ ಗೈಡ್‌ಲೈನ್ಸ್ ಪ್ರಕಾರ ಏನಾದರೂ ತೊಂದರೆಯಾಗಿ ಖರ್ಚಿನಲ್ಲಿ ಹೆಚ್ಚು ಕಡಿಮೆಯಾಗಿದ್ದರೆ, ಅದಕ್ಕೆ ಮಂಜೂರಾತಿ ಕೊಡುತ್ತೇವೆ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಹೆಚ್.ಎಂ. ಚಂದ್ರಶೇಖರಪ್ಪ :— ಮಾನ್ಯ ಅಧ್ಯಕ್ಷರೆ, ಇನ್ನು ಕೆಲವು ಕಾಮಗಾರಿಗಳು ಪೂರ್ಣವಾಗದೇ ಹಾಗೆ ಉಳಿದಿವೆ. ಜೊತೆಗೆ ಇನ್ನು ಕೆಲವು ರಸ್ತೆ ಕಾಮಗಾರಿಗಳ ಫೈಲ್ ಮುಖ್ಯ ಇಂಜಿನಿಯರ್ ರವರ ಕಛೇರಿಗೆ ಬಂದಿದೆ. ಆದ್ದರಿಂದ ಆದಷ್ಟು ಜಾಗ್ರತೆ ಸದರಿ ಕೆಲಸಗಳಿಗೆ ಮಂಜೂರಾತಿ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ರಾಜ್ಯದ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಯೋಜನೆ.

248(2686) ಶ್ರೀ ಸದಾನಂದಗೌಡ ಡಿ.ವಿ. (ಪುತ್ತೂರು) :— ಮಾನ್ಯ ಲೋಕೋಪಯೋಗಿ ಸಚಿವರು ಆ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸುವ ಯೋಜನೆಗೆ ಯಾರಿಂದ ನೆರವನ್ನು ಪಡೆಯಲಾಗುತ್ತಿದೆ; ಎಷ್ಟು ಕೋಟಿ ರೂಪಾಯಿಗಳ ನೆರವನ್ನು ಪಡೆಯಲಾಗುತ್ತಿದೆ; ಇದರಲ್ಲಿ ರಾಜ್ಯ ಪಾಲು ಎಷ್ಟು:

ಆ) ಈ ಹಣದಲ್ಲಿ ಎಷ್ಟು ಕಿಲೋಮೀಟರ್ ರಸ್ತೆಯನ್ನು ಮೇಲ್ದರ್ಜೆಗೇರಿಸಲು ಉದ್ದೇಶಿಸಲಾಗಿದೆ; (ಜಿಲ್ಲಾವಾರು ಕಿಲೋಮೀಟರ್‌ವಾರು ಮಾಹಿತಿ ನೀಡುವುದು)

ಇ) ಈ ಯೋಜನೆಯು ಈಗ ಯಾವ ಹಂತದಲ್ಲಿದೆ; ಇನ್ನು ಎಷ್ಟು ವರ್ಷಗಳಲ್ಲಿ ಸದರಿ ಯೋಜನೆ ಪೂರ್ಣಗೊಳ್ಳಲಿದೆ;

ಶ್ರೀ ಧರಮ್‌ಸಿಂಗ್ (ಲೋಕೋಪಯೋಗಿ ಸಚಿರು) :—

ಅ) ರಾಜ್ಯ ಹೆದ್ದಾರಿಗಳನ್ನು ಮೇಲ್ದರ್ಜೆಗೇರಿಸಲು ಹಾಗೂ ಪುನ:ಶ್ಚೇತನಗೊಳಿಸಲು ವಿಶ್ವಬ್ಯಾಂಕ್‌ನಿಂದ 1637 ಕೋಟಿ ರೂ.ಗಳ ಸಾಲವನ್ನು ಪಡೆಯಲಾಗುತ್ತಿದೆ. ರಾಜ್ಯದ ಪಾಲು 396 ಕೋಟಿ ರೂ.ಗಳು.